5

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12]
Total No. of Printed Pages : 12]

ಒಟ್ಟು ಪ್ರಶ್ನೆಗಳ ಸಂಖ್ಯೆ : 38]
Total No. of Questions : 38]

ಸಂಕೇತ ಸಂಖ್ಯೆ : 62-K

Code No. : 62-K

B

CCE RR
UNREVISED
REDUCED SYLLABUS

Question Paper Serial No. 411

ವಿಷಯ : ತೃತೀಯ ಭಾಷೆ — ಕನ್ನಡ

Subject : Third Language — KANNADA

(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)

ದಿನಾಂಕ : 16. 06. 2023] [Date : 16. 06. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ] [Time : 10-30 A.M. to 1-30 P.M.

ಗರಿಷ್ಠ ಅಂಕಗಳು : 80] [Max. Marks : 80

ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 8 × 1 = 8

1. 'ಪರಿಚಿತ' – ಪದದ ವಿರುದ್ಧಾರ್ಥಕ ರೂಪ

(ಎ) ಅಪರಿಮಿತ

(ಬಿ) ಅಪ್ರಮಾಣ

(ಸಿ) ಅಪರಿಚಿತ

(ಡಿ) ಪ್ರಸಿದ್ಧ

2. ಕೆಳಗಿನವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆ

(ಎ) ರಕ್ತಗಾಲಿನ

(ಬಿ) ಗುಂಡಿಲ್ಲದ

(ಸಿ) ನವೋದಯ

(ಡಿ) ಕುಲವೆನ್ನದ

3. ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ಮತ್ತು ಖಚಿತ ಅರ್ಥ ಕೊಡುವ ವಾಕ್ಯಗಳನ್ನು ಈ ರೀತಿ ಕರೆಯುವರು

(ಎ) ಸಾಮಾನ್ಯವಾಕ್ಯ

(ಬಿ) ಸಂಯೋಜಿತ ವಾಕ್ಯ

(ಸಿ) ಮಿಶ್ರವಾಕ್ಯ

(ಡಿ) ಅಲಂಕಾರಿಕ ವಾಕ್ಯ

4. 'ದೃಷ್ಟಿ' – ಈ ಪದದ ತದ್ಭವ ರೂಪ

(ಎ) ದರ್ಶನ

(ಬಿ) ದಿವ್ಯ

(ಸಿ) ದಿಬ್ಬ

(ಡಿ) ದಿಟ್ಟಿ

5. ಇವುಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರದಿಂದ ಕೂಡಿರುವ ಪದ

(ಎ) ಅಮ್ಮ

(ಬಿ) ರಾತ್ರಿ

(ಸಿ) ಹಬ್ಬ

(ಡಿ) ಅಜ್ಜ

6. 'ಮರದಲ್ಲಿ' – ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ

(ಎ) ಸಪ್ತಮೀ

(ಬಿ) ದ್ವಿತೀಯಾ

(ಸಿ) ಪ್ರಥಮಾ

(ಡಿ) ಚತುರ್ಥೀ

7. 'ಹುಡುಗ' – ಪದದ ಬಹುವಚನ ರೂಪ

(ಎ) ಹುಡುಗರು

(ಬಿ) ವಿದ್ಯಾರ್ಥಿಗಳು

(ಸಿ) ಪಾಲಕರು

(ಡಿ) ಹುಡುಗಿಯರು

8. ಪದಗಳಿಗೆ ಹೆಚ್ಚುವರಿ ವಿವರಣೆಗಳನ್ನು ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಈ ಲೇಖನ ಚಿಹ್ನೆಯನ್ನು ಬಳಸಲಾಗುತ್ತದೆ

(ಎ) ಉದ್ಧರಣ

(ಬಿ) ಅಲ್ಪವಿರಾಮ

(ಸಿ) ಅರ್ಧವಿರಾಮ

(ಡಿ) ಆವರಣ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4 × 1 = 4

9. ಜಾತಿ ಇಲ್ಲದ ಭೀತಿ ಇಲ್ಲದ : ಬಾಳ ಕಟ್ಟತೇವ :: ಗೋಳಿಲ್ಲದ ಗುಂಡಿಲ್ಲದ : ....

10. ಸತ್ಯವ ನುಡಿವುದೇ : ದೇವಲೋಕ :: ಮಿಥ್ಯವ ನುಡಿವುದೇ : ....

11. ಕಿತ್ತೂರು ರಾಣಿ : ಚೆನ್ನಮ್ಮ :: ಉಲ್ಲಾಳದ ರಾಣಿ : ....

12. ಹಾಸನ ನಗರ : ಭಾರತ :: ಮಿನಿಪೊಲೀಸ್ ನಗರ : ....

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4 × 1 = 4

13. ಶರೀಫರು ಸ್ವಪ್ರಯತ್ನದಿಂದ ಏನನ್ನು ಕಲಿತರು ?

14. ಪುರಂದರದಾಸರು ಡಾಂಭಿಕ ಭಕ್ತನ ದೇವರ ಕೋಣೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?

15. ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುದು ?

16. ಧರ್ಮಪದನ ತಂದೆಯ ಹೆಸರೇನು ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 × 2 = 16

17. ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು ?

18. ಗಾಂಧೀಜಿಯವರು ಗೌರಮ್ಮನವರ ಮನೆಗೆ ಏಕೆ ಬಂದರು ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

19. ಮೋಹನಪುರದ ಸತ್ಯಾಗ್ರಹಿಗಳು ಮಾಡುತ್ತಿದ್ದ ಘೋಷಣೆಗಳಾವವು ?

20. ಕೊಡಗಿನ ಗೌರಮ್ಮನವರ ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ವಿಚಾರಗಳಾವುವು ?

21. ಮನುಷ್ಯರ ನಡುವಿನ ವೈಮನಸ್ಸನ್ನು ತೊಡೆದು ಹಾಕುವ ಕನಸು 'ಕಟ್ಟತೇವ ನಾವು' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ ?

22. ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದಕ್ಕೆ ನಿಸಾರ್ ಅಹಮದ್‌ರವರು ನೀಡಿರುವ ನಿದರ್ಶನಗಳಾವವು ?

23. ಮೋಡಗಳು ಕಾಣಿಸಿಕೊಂಡಾಗ ರೈತನಿಗಾದ ಸಂತೋಷವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

24. ಧರ್ಮಪದನಿಗೆ ವಿಷ ಉಣಿಸಲು ಪ್ರಯತ್ನಿಸಿದ್ದೇಕೆ ?

V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2 × 3 = 6

25. "ತಾಯಿ ಎಂದು ಕರೆದ ಕನ್ನಡದ ಕಂದ ಯಾರು ?"

26. "ಒಡೆದ ಮನಸುಗಳ ಕಂಡ ಕನಸುಗಳ ಕಟ್ಟೇ ಕಟ್ಟತೇವ."

VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 × 3 = 12

27. ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳನ್ನು ಕುರಿತು ಬರೆಯಿರಿ.

28. ರಾಮಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ಹೇಗೆ ಪ್ರಶಂಸಿಸುತ್ತೀರಿ ? ವಿವರಿಸಿ.

29. ನುಡಿ ನಡೆಗಳು ಎಲ್ಲಕ್ಕಿಂತ ಮುಖ್ಯವಾದುದೆಂದು ಬಸವಣ್ಣನವರು ಹೇಗೆ ನಿರೂಪಿಸಿದ್ದಾರೆ ? ವಿವರಿಸಿ.

30. ಮಳೆದೇವರಲ್ಲಿ ರೈತನ ಪ್ರಾರ್ಥನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6

31. ಗೊರೂರು ರಾಮಸ್ವಾಮಿ ಅಯ್ಯಂಗಾರ್

32. ಪುರಂದರದಾಸರು

VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3

33. "ಮಾಡಿದ್ದು ಉಣ್ಣೋ ಮಹಾರಾಯ."

ಅಥವಾ

"ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು."

IX. ಕೆಳಗಿನ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4

34. ಗೋವಿಂದಭಟ್ಟರು ಯಾರು ? ಅವರ ಗುಣ ಸ್ವಭಾವಗಳನ್ನು ತಿಳಿಸಿ.

ಅಥವಾ

ಶರೀಫರು ಮತ್ತು ಗೋವಿಂದಭಟ್ಟರ ನಡುವಿನ ಅನ್ಯೋನ್ಯತೆಯನ್ನು ಕುರಿತು ವಿವರಿಸಿ.

X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4

35. ನಾವು ನೀವು ....

....

....

.... ಇಂದೆ

ಅಥವಾ

ಕರ್ನಾಟಕ ....

....

....

.... ಒಂದೆ.

XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

1 × 4 = 4

36. 'ಜಲವೇ ಜೀವನ' ಎಂಬ ಮಾತನ್ನು ನಾವೆಲ್ಲ ಕೇಳಿರುತ್ತೇವೆ. ಅದರಲ್ಲೂ ಅಂತರ್ಜಲವು ಮನುಷ್ಯರನ್ನು ಮೊದಲ್ಗೊಂಡು ಎಲ್ಲಾ ಜೀವಿಗಳ ಸಂಜೀವಿನಿ ಆಗಿದೆ. ಭೂಮಿಯ ಒಳಗಡೆ ಇರುವ ನೀರನ್ನು ಅಂತರ್ಜಲವೆಂದು ಕರೆಯುತ್ತಾರೆ.

ಇತ್ತೀಚಿನ ದಿನಗಳಲ್ಲಿ ಅರಣ್ಯನಾಶ, ಕೊಳವೆಬಾವಿ ಕೊರೆತ, ನಗರಗಳಲ್ಲಿ ಕಾಂಕ್ರಿಟೀಕರಣ ಇವುಗಳಿಂದಾಗಿ ಬಿದ್ದ ಮಳೆ ನೀರು ಭೂಮಿಯೊಳಕ್ಕೆ ಇಂಗುವುದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಭೂಮಿ ಒಂದು ಜಲಪಾತ್ರೆ ಮಾತ್ರ. ಅದುವೇ ನೀರಿನ ಮೂಲ ಅಲ್ಲ. ಬಿದ್ದ ಮಳೆನೀರು ಈ ಪಾತ್ರೆಯಲ್ಲಿ ತುಂಬಿದರೆ ಮಾತ್ರ ಮುಂದಿನ ಬೇಸಿಗೆಗೂ ತೊಂದರೆ ಇರದು.

ಅಂತರ್ಜಲ ಹೆಚ್ಚಾಗಬೇಕಾದರೆ ಮಳೆನೀರನ್ನು ತಡೆಯುವ ತಡೆಗಳು ಬೇಕು. ಕಾಡು ಒಂದು ನೈಸರ್ಗಿಕ ಬಹುಹಂತಗಳ ತಡೆ. ಕಾಡೇ ನದಿಗಳ ತಾಯಿ. ನಮ್ಮ ಪೂರ್ವಜರು ಕೆರೆ, ಮದಕ, ಒಡ್ಡುಗಳಂತಹ ತಡೆಗಳನ್ನು ನಿರ್ಮಿಸುತ್ತಿದ್ದರು. ಆದರೆ ನಾವಿಂದು ಅವುಗಳನ್ನು ನಾಶ ಮಾಡಿ ಬಿದ್ದ ಮಳೆನೀರು ಅಮೂಲ್ಯವಾದ ಮೇಲ್ಮಣ್ಣನ್ನು ಕೊಚ್ಚಿಕೊಂಡು ಹೋಗಿ ನಮ್ಮ ಜಲಮೂಲಗಳು ಹೂಳಿನಿಂದ ತುಂಬುವಂತೆ ಮಾಡುತ್ತಿದ್ದೇವೆ. ಹೂಳು ಅಂತರ್ಜಲದ ಮರುಪೂರಣಕ್ಕೆ ಕುಂದು ತರುತ್ತಿದೆ. ಆದ್ದರಿಂದ ಪ್ರತಿವರ್ಷ ಅಂತರ್ಜಲಮಟ್ಟ ಕುಸಿಯುತ್ತಿದೆ.

ಪ್ರಶ್ನೆಗಳು :

ಎ) ಮಳೆನೀರು ಭೂಮಿಯೊಳಕ್ಕೆ ಇಂಗುವುದು ಕಡಿಮೆಯಾಗುತ್ತಿದೆ ಏಕೆ ?

ಬಿ) ಯಾವುದು ಅಂತರ್ಜಲ ಮರುಪೂರಣಕ್ಕೆ ಕುಂದು ತರುತ್ತಿದೆ ?

ಸಿ) ಪೂರ್ವಜರು ಮಳೆನೀರು ತಡೆಯಲು ನಿರ್ಮಿಸಿದ ತಡೆಗಳಾವವು ?

ಡಿ) ನದಿಗಳ ತಾಯಿ ಯಾರು ?

XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 4 = 4

37. ಸ್ವಚ್ಛಭಾರತ ಅಭಿಯಾನ.

ಅಥವಾ

ಮರಗಳ ಮಹತ್ವ ಮತ್ತು ಸಂರಕ್ಷಣೆ

XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5

38. ನಿಮ್ಮನ್ನು ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅಮರ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ನಿಮ್ಮ ಅಣ್ಣನನ್ನು ಆಹ್ವಾನಿಸಿ, ಒಂದು ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಹಾವೇರಿಯ ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿ 'ಆದಿತ್ಯ' ಎಂದು ಭಾವಿಸಿಕೊಂಡು, ನಿಮ್ಮ ಗ್ರಾಮಕ್ಕೆ ಸುಸಜ್ಜಿತ ಗ್ರಂಥಾಲಯ ಮಂಜೂರು ಮಾಡುವಂತೆ ಕೋರಿ, ಮಾನ್ಯ ಜಿಲ್ಲಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.